ಶ್ರೀ ಎಂ.ವೀರಪ್ಪಮೊಯಿಲಿ :- ಏಪ್ರಿಲ್ ಒಂದು ಕನ್ನಡಿಗರ ಮೂರ್ಖರ ದಿನವಲ್ಲ. ಅದು ಆಂಗ್ಲರ ಮೂರ್ಖರ ದಿನ. ಆಂಗ್ಲರ ಮೂರ್ಖರ ದಿನವನ್ನು ತಾವು ಆಚರಣೆ ಮಾಡುವುದಕ್ಕೆ ಹೋದರೆ ಕನ್ನಡಕ್ಕೆ ಇದಕ್ಕಿಂತ ದೊಡ್ಡ ಅಪಮಾನ ಇಲ್ಲ.

ಶ್ರೀ ವಾಟಾಳ್‌ನಾಗರಾಜ್ :- ಮಾನ್ಯ ಅಧ್ಯಕ್ಷರೆ ನಾನು ಆಚರಣೆ ಮಾಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಿರುವುದು ಏಪ್ರಿಲ್ ಒಂದನೇ ತಾರೀಖಿನಿಂದ ಎಂದು. ನಾನಾಗಿದ್ದರೆ ಯುಗಾದಿ ಹಬ್ಬದ ದಿನ ಎಂದು ಹೇಳುತ್ತಿದ್ದೆ. ನೀವು ಏಪ್ರಿಲ್ ಒಂದು ಎಂದಾಗ ನನಗೆ ಸ್ವಲ್ಪ ಅನುಮಾನವಾಯಿತು. ಹಾಗೂ ನಿಮ್ಮಲ್ಲಿ ನಾನು ಕೇಳುವುದೇನೆಂದರೆ ತಮ್ಮ ಕನ್ನಡದ ಕಾಳಜಿ ಬಗ್ಗೆ ಪ್ರಾಮಾಣಕತೆಯಬಗ್ಗೆ ನಮಗೆ ಬಹಳ ಅಪಾರವಾದಂತಹ ಗೌರವ ಇದೆ. ಅದರಲ್ಲಿ ಎರಡು ಅಭಿಪ್ರಾಯವಿಲ್ಲ. ನಿಮ್ಮಲ್ಲಿ ಕನ್ನಡ ಬಾರದೇ ಇರುವಂತಹ ಮಂತ್ರಿಗಳು ಮತ್ತು ಕನ್ನಡ ಬಾರದ ಇರುವಂಹ ಶಾಸಕರು ಯಾರು ಇದ್ದಾರೆ. ಇದರ ಮಾಹಿತಿ ನಮಗೆ ಸ್ವಲ್ಪ ಬೇಕಾಗಿದೆ. ಏಕೆಂದರೆ ನಮ್ಮ ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರಾದಂತಹ ಶ್ರೀಮಾನ್ ವಿಶ್ವನಾಥರವರು ಅನೇಕ ಸಮ್ಮೇಳನಗಳಲ್ಲಿ ಕನ್ನಡ ಬಾರದೇ ಇರುವ ಸಚಿವರು ಮತ್ತು ಶಾಸಕರು ಇದ್ದಾರೆ. ಇವರ ಅಡ್ಡಿಯಿಂದ ನಮಗೆ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಲಿಕ್ಕೆ ಆಗುತ್ತಿಲ್ಲ ಎಂದು ಹೇಳಿದ್ದಾರೆ. ಅದು ನಿಜವೇ ಇದ್ದರೆ ಅಂತಹವರು ಯಾರಿದ್ದಾರೆ ಎನ್ನುವುದನ್ನು ನಮಗೆ ತಿಳಿಸಬೇಕು.

ಶ್ರೀ ಎಂ.ವೀರಪ್ಪಮೊಯಿಲಿ :- ಮಾನ್ಯ ಅಧ್ಯಕ್ಷರೆ ಕನ್ನಡ ಬಾರದ ಶಾಸಕರು ಯಾರಾದರೂ ಇದ್ದರೆ ಅವರನ್ನು ಕನ್ನಡದ ಕಾವೇರಿಯಲ್ಲಿ ಮೂರು ಸಾರಿ ಮುಳುಗಿಸಿ ಏಳಿಸಿ ಅವರಿಗೆ ಕನ್ನಡ ಬರುವ ಹಾಗೆ ಮಾಡುತ್ತೇವೆ. ತಮಗೆಲ್ಲಾ ಗೊತ್ತಿದೆ. ಶ್ರೀ ಭೀಮಣ್ಣಖಂಡ್ರೆಯವರು ಕನ್ನಡ ಕಲಿತಿಲ್ಲ. ಆದರೂ ಅವರಿಗೆ ಕನ್ನಡದ ಬಗ್ಗೆ ಇರುವ ಅನುಕಂಪ ಅತೀವ ಆಸಕ್ತಿ ಮತ್ತು ಹೋರಾಟದ ಮನಸ್ಸು ಬಹಳ ಜನರಿಗೆ ಇಲ್ಲ.

ಶ್ರೀ ವಾಟಾಳ್‌ನಾಗರಾಜ್ :- ಅವರ ಬಗ್ಗೆ ಟೀಕೆ ಮಾಡುವುದಿಲ್ಲ. ಅವರಿಗೆ ಕನ್ನಡದ ಬಗ್ಗೆ ಕಾಳಜಿ ಇದೆಯೆಂದು ನಾವು ತಿಳಿದುಕೊಂಡಿದ್ದೇವೆ.

ಶ್ರೀ ಕೆ.ಎಚ್.ರಂಗನಾಥ :- ಶ್ರೀ ಭೀಮಣ್ಣಖಂಡ್ರೆಯವರು ಈ ಸದನಕ್ಕೆ ಮೊದಲು ಬಂದಾಗ ಅವರು ಭಾಷಣ ಮಾಡಿದ್ದು ಉರ್ದುಭಾಷೆಯಲ್ಲಿ, ಕನ್ನಡದಲ್ಲಿ ಅಲ್ಲ. ಈಗ ಅವರು ಬದಲಾವಣೆ ಆಗಿರುವುದು ನೋಡಿದರೆ ಆಶ್ಚರ್ಯವಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ :- ಶ್ರೀ ಭೀಮಣ್ಣಖಂಡ್ರೆಯವರು ಕನ್ನಡದಲ್ಲಿ ಮಾತನಾಡಿದರೆ ಅದನ್ನು ಟ್ರಾನ್ಸ್‌ಲೇಟ್ ಮಾಡುವುದಕ್ಕೆ ಯಾರನ್ನಾದರೂ ಒಬ್ಬರನ್ನು ಇಡಬೇಕು.

ಭಟ್ಕಳದಲ್ಲಿ ಮಂಜೂರಾದ ಕ್ರೀಡಾಂಗಣದ ಕೆಲಸ.

300 (1345) ಶ್ರೀ ಆರ್.ಎನ್.ನಾಯ್ಕ(ಭಟ್ಕಳ) :- ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) 1992-93ನೇ ವರ್ಷದಲ್ಲಿ ರಾಜ್ಯದಲ್ಲಿ ಯಾವ ತಾಲೂಕುಗಳಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಹಣ ಬಿಡಿಗಡೆ ಮಾಡಲಾಗಿದೆ ;

ಆ) ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿ ಮಂಜೂರಾದ ಕ್ರೀಡಾಂಗಣದ ಕೆಲಸವನ್ನು ಪ್ರಾರಂಭ ಮಾಡಲಾಗಿದೆಯೆ ;

ಶ್ರೀ ಹೆಚ್.ವಿಶ್ವನಾಥ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು) :-

ಅ) 1992-93ನೇ ವರ್ಷದಲ್ಲಿ ರಾಜ್ಯದ 16 ತಾಲೂಕುಗಳಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಹಣ ಬಿಡುಗಡೆ ಮಾಡಲಾಗಿದೆ.

ಆ) ಇಲ್ಲ

ಶ್ರೀ ಆರ್.ಎನ್.ನಾಯ್ಕ್ :- ಮಾನ್ಯ ಅಧ್ಯಕ್ಷರೇ, ರಾಜ್ಯದ 16 ತಾಲೂಕುಗಳಲ್ಲಿ ಕ್ರೀಡಾಂಗಣದ ನಿರ್ಮಾಣಕ್ಕೂ ಹಣ ಬಿಡುಗಡೆ ಮಾಡಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಈ 16 ತಾಲೂಕುಗಳಲ್ಲಿ ಎಲ್ಲೆಲ್ಲಿ ಕೆಲಸ ಪ್ರಾರಂಭ ಆಗಲ್ಲ ಎಂಬುದನ್ನು ತಿಳಿಸಬೇಕು ಮತ್ತು ಭಟ್ಕಳದಲ್ಲಿ ಮಂಜೂರಾದ ಕ್ರೀಡಾಂಗಣದ ಕೆಲಸ ಪ್ರಾರಂಭವಾಗದೆ ಇರುವುದಕ್ಕೆ ಕಾರಣಗಳು ಏನು ಎಂಬುದನ್ನು ಸವಿಸ್ತಾರವಾಗಿ ತಿಳಿಸಬೇಕು. ನಾನು ಅವರಿಗೆ ಪ್ರಥಮವಾಗಿ ಈ ಶಾಸನಸಭೆಯಲ್ಲಿ ಪ್ರಶ್ನೆಯನ್ನು ಕೇಳುತ್ತಿದ್ದೇನೆ, ಇದಕ್ಕೆ ಉತ್ತರವನ್ನು ಬಯಸುತ್ತೇನೆ.

ಶ್ರೀ ಹೆಚ್.ವಿಶ್ವನಾಥ್ :- - ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಸುಮಾರು 16 ಕ್ರೀಡಾಂಗಣಗಳಿಗೆ 134 ಲಕ್ಷ ರೂಪಾಯಿಗಳು ಸರ್ಕಾರದಲ್ಲಿ ಇದ್ದು, 8 ಕ್ರೀಡಾಂಗಣಗಳಿಗೆ ಆಡಳಿತಾತ್ಮಕ ಮಂಜೂರಾತಿ ದೊರೆತಿದ್ದು 12 ಕ್ರೀಡಾಂಗಣಗಳು ಪೆಂಡಿಂಗ್‌ನಲ್ಲಿದೆ. ತಕ್ಷಣದಲ್ಲಿ ಅವಕ್ಕೂ ಆಡಳಿತಾತ್ಮಕ ಮಂಜೂರಾತಿ ಕೊಟ್ಟು ಕೆಲಸ ಪ್ರಾರಂಭಿಸುತ್ತೇವೆ. ಭಟ್ಕಳದಲ್ಲಿ ಭೂಮಿಯ ಬಗ್ಗೆ ವಿವಾದವಿತ್ತು. ಈಗ ಜಿಲ್ಲಾಧಿಕಾರಿಗಳು 6 ಎಕರೆ 13 ಕುಂಟೆ ಸರ್ಕಾರಿ ಜಮೀನನ್ನು ನಮ್ಮ ಇಲಾಖೆಗೆ ಹಸ್ತಾಂತರ ಮಾಡಿದ್ದಾರೆ. ಈಗ ಅದರ ಅಂದಾಜು ವೆಚ್ಚ, ನಕ್ಷೆಯನ್ನು ಇಲಾಖೆಯಿಂದ ತಯಾರಿಸಲಾಗುತ್ತಿದೆ. ಭಟ್ಕಳದ ಕ್ರೀಡಾಂಗಣ ಆಗುವಂತಹ ವಿಚಾರದಲ್ಲಿ ವಿವಾದಗಳು ಅಧಿಕಾರಿಗಳ ಮಟ್ಟದಲ್ಲಿ ಬಗೆಹರಿದಿದೆಯೆಂದು ನಾನು ಅಂದುಕೊಂಡಿದ್ದೇನೆ. ಆದರೆ ರಾಜಕೀಯ ಮಟ್ಟದಲ್ಲಿ ಚೂರುಪಾರು ಇದ್ದರೆ ಅದನ್ನು ಸ್ಥಳೀಯ ಶಾಸಕರಾದ ಆರ್.ಎನ್.ನಾಯ್ಕ್ ಅವರ ಸಮಜಾಯಿಶಿ ತೆಗೆದುಕೊಂಡು ಈ ಕ್ರೀಡಾಂಗಣದ ಕೆಲಸವನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎಂದು ಹೇಳುತ್ತೇನೆ.

ಶ್ರೀ ಆರ್.ಎಸ್.ನಾಯ್ಕ್ :- ಮಾನ್ಯ ಅಧ್ಯಕ್ಷರೇ, ಅವರು ನನ್ನ ಮಾತಾನಾಡುವುದಕ್ಕೆ ಇಲ್ಲಿ ಕರೆದಿದ್ದಾರೆ. ರಾಜಕೀಯವಾಗಿ ಅಲ್ಲಿ ಯಾವ ತೊಡಕು ತೊಂದರೆಗಳೂ ನನಗೆ ಗೊತ್ತಾಗುತ್ತಿಲ್ಲ. ನೆಲ ಸಿಕ್ಕಿದೆ, ಹಣ ಸಿಕ್ಕಿದೆ, ಅಲ್ಲಿನ ಅಧಿಕಾರಿಗಳು ಏನೇನು ಅವಶ್ಯಕತೆ ಬೇಕು ಎಂಬುದನ್ನು ಕಳುಹಿಸಿದ್ದಾರೆ. ಆಡಳಿತಾತ್ಮಕವಾಗಿ ಇನ್ನೂ ಮಂಜೂರುಸಿಕ್ಕಿಲ್ಲವೆಂದು ಹೇಳಿದರೆ ಮೇಲ್ಮಟ್ಟದ ಅಧಿಕಾರಿಗಳು ನಿದ್ದೆ ಮಾಡುತ್ತಿದ್ದರು, ಹೀಗೆ ಕೆಲಸ ಮಾಡದೆಯಿರುವ ಅಧಿಕಾರಿಗಳು ಇದ್ದರೆ ಬೇರೆ ಕಡೆ ಕಳುಹಿಸಿಕೊಡಿ ನೀವು ಏಕೆ ಅವರನ್ನು ಇಟ್ಟುಕೊಂಡಿದ್ದೀರಿ. ರಾಜಕೀಯವಾಗಿ, ತೊಡಕುಗಳು, ತೊಂದರೆಗಳು ನನ್ನಿಂದ ಏನೂ ಆಗಿಲ್ಲ. ನಾನು ಆ ಕ್ರೀಡಾಂಗಣ ಆಗಲೇ ಬೇಕು ಎಂದು ಹೇಳುತ್ತಿದ್ದೇನೆ. ಅಲ್ಲಿಗೆ ಅದು ಅವಶ್ಯಕವಾಗಿ ಬೇಕಾಗಿದೆ. ತಾವು ಮಾರ್ಚ್ 31ರ ಒಳಗೆ ಬಂದು ಫೌಂಡೇಷನ್ ಹಾಕುವುದಕ್ಕೆ ತಯಾರು ಇದ್ದೀರೋ ಇಲ್ಲವೋ ಮಾರ್ಚ್ ಒಳಗೆ ಕೆಲಸ ಪ್ರಾರಂಭವಾಗದೆ ಇದ್ದರೆ ಹಣ ಉಳಿದುಕೊಳ್ಳುತ್ತದೋ ಅಥವ ಲ್ಯಾಪ್ಸ್ ಆಗುತ್ತದೋ ಎನ್ನುವುದನ್ನು ದಯಮಾಡಿ ತಿಳಿಸಿ. ನಮ್ಮಿಂದ ಯಾವ ತೊಂದರೆಯೂ ಇಲ್ಲ. ನಾನೇ ಮಾಡಿ ಎಂದು ವಿನಂತಿ ಮಾಡುತ್ತಿದ್ದೇನೆ. ದೊಡ್ಡವರಮಟ್ಟದಲ್ಲಿ, ಮಂತ್ರಿಮಂಡಲದಲ್ಲಿ ತೊಂದರೆ ಇದ್ದರೆ ಮುಚ್ಚುಮರೆಯಿಲ್ಲದೆ ವಿವರಣೆ ಕೊಡಿ.

ಶ್ರೀ ಹೆಚ್.ವಿಶ್ವನಾಥ್ :- ಮಾನ್ಯ ಅಧ್ಯಕ್ಷರೇ, ಇಲ್ಲಿ ಹೆಚ್ಚಿನ ವಿವಾದಕ್ಕೆ ಆಸ್ಪದವಿಲ್ಲ. ತಾವು

ಹೇಳಿದ ಪ್ರಕಾರ, ಕೆಲವು ಸಲ ಅಧೀನ ಅಧಿಕಾರಿಗಳು ಏನೇನು ಮಾಡಬೇಕೊ ಅದನ್ನು ಕಳುಹಿಸುತ್ತಾರೆ. ಆದರೆ ಒಂದೊಂದು ಸಲ ವಿಧಾನಸೌಧದಲ್ಲಿ ಕೂಡ ವಿಳಂಬವಾಗುತ್ತದೆ. ಮುಖ್ಯಮಂತ್ರಿಗಳು ಯಾವ ಕಡತಗಳನ್ನೂ ಹೆಚ್ಚು ದಿನಗಳು ಇಟ್ಟುಕೊಳ್ಳಬಾರದೆಂದು ಆದೇಶ ಹೊರಡಿಸಿರುವುದರಿಂದ ನನ್ನ ಇಲಾಖೆಯಲ್ಲಿರುವಂತಹ ಪೆಂಡಿಂಗ್ ಕಡತಗಳನ್ನು ಆಡಳಿತಾತ್ಮಕವಾಗಿ ಮಂಜೂರಾತಿಗೆ ಜರೂರಾಗಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಮಾರ್ಚ್ 31ರೊಳಗೆ ಭಟ್ಕಳದ ಕ್ರೀಡಾಂಗಣದ ಬಗ್ಗೆ ಸೂಕ್ತ ತೀರ್ಮಾನ ತೆಗೆದುಕೊಂಡು ಇರತಕ್ಕ ಹಣ ಪೋಲಾಗದ ರೀತಿಯಲ್ಲಿ ನೋಡಿಕೊಂಡು ಫೌಂಡೇಶನ್ ಹಾಕುವುದಕ್ಕೆ ಒಪ್ಪಿ ವಿಧಾನಸಭೆಯ ಅಧಿವೇಶನ ಮಾರ್ಚಿ ಕೊನೆಯವರೆಗೆ ನಡೆಯುತ್ತಿರುವುದರಿಂದ ಅಧಿವೇಶನ ಮುಗಿದಮೇಲೆ ಮಾಡಲಾಗುವುದು.

ಶ್ರೀ ಆರ್.ಎನ್.ನಾಯಕ್ :- ಮಾರ್ಚಿ 30ನೇ ತಾರೀಖು ಬರಲಿ. ಇಲ್ಲದಿದ್ದರೆ ಕೆಲಸ ಆಗುವುದಿಲ್ಲ ನನಗೆ ಗೊತ್ತಿದೆ. ಮಾರ್ಚಿ 26 ನೇ ತಾರೀಖು ಅಧಿವೇಶನ ಮುಗಿಯುತ್ತದೆ. 30 ನೇ ತಾರೀಖು ಬರುತ್ತೇನೆಂದು ನನಗೆ ಮಾತು ಕೊಡಿ.

ಶ್ರೀ ಹೆಚ್. ವಿಶ್ವನಾಥ್ :- ಮಾನ್ಯಸದಸ್ಯರಾದ ನಾಯಕರವರಿಗೆ ಕ್ರೀಡಾಂಗಣದ ಬಗ್ಗೆ ಇರತಕ್ಕ ಕಳಕಳಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರ ಸಮಜಾಯಿನ್ನು ತೆಗೆದುಕೊಂಡು ನಾನು ಕೆಲಸ ಮಾಡುತ್ತೇನೆ.

ಅಧ್ಯಕ್ಷರು :-ಶ್ರೀಮತಿ ಮೋಟಮ್ಮನವರೇ ತಾವು ಎದ್ದು ನಿಂತಿರಿ. ಇದು ಬಟ್ಕಳಕ್ಕೆ ಸಂಬಂಧಪಟ್ಟ ಪ್ರಶ್ನೆಯಿದೆ ತಮಗೆ ಸಂಬಂಧವಿಲ್ಲ.

ಶ್ರೀಮತಿ ಮೋಟಮ್ಮ :- ಮಾನ್ಯ ಅಧ್ಯಕ್ಷರೆ ಮಾನ್ಯ ಮಂತ್ರಿಗಳು 12ಸ್ಪೇಡಿಯಂಗಳ ಕೆಲಸ ಪೆಂಡಿಂಗ್‌ನಲ್ಲಿದೆ. ಅವಕ್ಕೆ ಆಡಳಿತಾತ್ಮಕ ಮಂಜುರಾತಿ ದೊರತಿಲ್ಲವೆಂದು ಹೇಳಿದ್ದಾರೆ. ಅವು ಯಾವ್ಯಾವ ಸ್ಪೇಡಿಯಂಗಳು ಯಾವ್ಯಾವ ಕಾರಣಗಳಿಂದ ಅವುಗಳಿಗೆ ಆಡಳಿತಾತ್ಮಕ ಮಂಜುರಾತಿ ದೊರೆತಿಲ್ಲವೆನ್ನುವುದನ್ನು ಮಾನ್ಯ ಮಂತ್ರಿಗಳು ಸ್ಪಷ್ಟಪಡಿಸಬೇಕು.

ಶ್ರೀ ಹೆಚ್. ವಿಶ್ವನಾಥ್ :- ಕೆಲವು ಕ್ರೀಡಾಂಗಣಗಳ ನಿವೇಶನ ನಮ್ಮ ಕೈಗೆ ದೊರತಿಲ್ಲ ಮತ್ತು ನಕ್ಷೆಗಳು ಬಂದಿಲ್ಲದೆ ಇರುವುದರಿಂದ ಅದರ ವಿವರಗಳನ್ನು ಕುರಿತು ನಾನು ಮತ್ತು ಮೋಟಮ್ಮನವರು ಪ್ರತ್ಯೇಕವಾಗಿ ಮಾತನಾಡುತ್ತೇವೆ.

9ನೇ ವಿಧಾನ ಸಭೆಯ ಸದಸ್ಯರು, ವಿಧಾನಪರಿಷತ್ತಿನ ಸದಸ್ಯರು ಮತ್ತು ಸಚಿವರ ಮೇಲೆ ದಾಖಲಾಗಿರುವ ಮೊಕದ್ದಮೆಗಳು.

12(615) ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) 9ನೇ ವಿಧಾನ ಸಭೆಯ ಸದಸ್ಯರು, ವಿಧಾನಪರಿಷತ್ತಿನ ಸದಸ್ಯರು ಮತ್ತು ಸಚಿವರ ಮೇಲೆ ಈವರೆಗೆ ದಾಖಲಾಗಿರುವ ಮೊಕದ್ದಮೆಗಳು ಎಷ್ಟು,

ಆ) ಮೊಕದ್ದಮೆಗಳು. ಯಾವ ಯಾವ ದಂಡ ಸಂಹಿತೆಯ ಸೆಕ್ಷನ್ನಿನ ಪ್ರಕಾರ ದಾಖಲಾಗಿವೆ.

ಇ) ಹಾಲಿ ಸಚಿವರಾಗಿರುವವರ ಮೇಲೆ ಅಂತಹ ಮೊಕದ್ದಮೆಗಳು ದಾಖಲಾಗಿದ್ದಲ್ಲಿ ಅಂತಹವರನ್ನು ಮಂತ್ರಿಮಂಡಲದಿಂದ ಕೈಬಿಡಲಾಗುವುದೇ?